ಶ್ರೀ ಎಂ. ಚಂದ್ರಶೇಖರ್ —ಮಾನ್ಯ ಅಧ್ಯಕ್ಷರೇ, ಈಗಾಗಲೇ ಹಾಕಿರುವ ಪೈಪು ಕೇವಲ ಕಾಲು ಇಂಚು ವ್ಯಾಸ ಇರುವುದರಿಂದ ನೀರು ಸರಬರಾಜಾಗುತ್ತಿಲ್ಲವೆಂದು ನನ್ನ ಗಮನಕ್ಕೆ ವಿಷಯ ಬಂದಿದೆ. ಈಗ ಳ ಇಂಚು ವ್ಯಾಸದ ಕೊಳವೆ ಹಾಕುವುದಕ್ಕೆ ೧.೬ಳಿ ಲಕ್ಷ ರೂಪಾಯಿಗಳ ಬಂದು ಅಂದಾಜು ಪಟ್ಟಿಯನ್ನು ಇಲಾಖೆಯವರು ಕಳುಹಿಸಿಕೊಟ್ಟಿದ್ದಾರೆ. ಈ ವರ್ಷ ಹಣ ಬಿಡುಗಡೆ ಮಾಡಿ ಕೆಲಸ ಮಾಡಿಸುತ್ತೇವೆ.

೩) ಕಳ್ಳಂಬೆಳ್ಳ ಮತ್ತು ಹುಳಿಯಾರು ಹೋಬಳಿಯ ಲಕ್ಷ್ಮೀಸಾಗರ ಕೆರೆ ಅಚ್ಚುಕಟ್ಟಿನಲ್ಲಿ ಬಿರುಗಾಳಿಯಿಂದಾಗಿ ಉಂಟಾದ ನಷ್ಟಕ್ಕೆ ಪರಿಹಾರ ಕೊಡುವ ಬಗ್ಗೆ.—

ಶ್ರೀ ಬಿ. ಗಂಗಣ್ಣ.— ಮಾನ್ಯ ಅಧ್ಯಕ್ಷರೇ, ಕಳ್ಳಂಬೆಳ್ಳ ಹುಳಿಯೂರು ಹೋಬಳಿಯಲ್ಲಿ ಮತ್ತು ತಿರಾ ಕ್ಷೇತ್ರದ ದೊಡ್ಡಗೆರೆ ಹೋಬಳಿ ಲಕ್ಷ್ಮೀಸಾಗರ ಕೆರೆ ಅಚ್ಚುಕಟ್ಟಿನಲ್ಲಿ ೨೩ ಮತ್ತು ೨೪ಳಿ–೪೮ ರಂದು ಬೀಸಿದ ಬಿರುಗಾಳಿಯಿಂದಲೂ ರೈತರಿಗೆ ತುಂಬಲಾಗದ ನಷ್ಟ ಮತ್ತು ತೊಂದರೆ ಉಂಟಾಗಿರುವ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳ ಗಮನವನ್ನು ಸೆಳೆಯುತ್ತಾ, ಈ ಕಳಕಂಡ ಪ್ರಶ್ನೆಯನ್ನು ನೀಡ ಬಯಸುತ್ತೇನೆ.

ಹುಳಿಯೂರು ಹೋಬಳಿಯಲ್ಲಿ ಸುಮಾರು ೩,೦೦೦ಕ್ಕೂ ಹೆಚ್ಚು ಫಲ ಬಿಡುವ ಅಡಿಕೆ ಮತ್ತು ತೆಂಗಿನ ಮರಗಳು ಬಿದ್ದಿ ಹೋಗಿರುತ್ತವೆ. ಜೋಡಿ ತಿಮ್ಮಲಾಪುರ ಮತ್ತು ಸೀಗೆ ಬಾಗಿ ಕೆರೆಗಳ ಅಚ್ಚುಕಟ್ಟಿನಲ್ಲಿ ಇದ್ದ ಸುಮಾರು ೩೦೦ ಎಕರೆ ಕಟಾವಿಗೆ ಬಂದಿದ್ದ ಬತ್ತದ ಫಸಲು ಹಾಳಾಗಿರುತ್ತದೆ ಇದೇ ರೀತಿ ತಿರಾ ತಾಲ್ಲೂಕಿನ ಲಕ್ಷ್ಮೀಸಾಗರ ಕೆರೆ ಅಚ್ಚುಕಟ್ಟಿನಲ್ಲಿ ಇದ್ದ ಸುಮಾರು ೩೦೦–೪೦೦ ಎಕರೆ ಭತ್ತದ ಫಸಲು ನಷ್ಟವಾಗಿರುತ್ತದೆ. ಇದಲ್ಲದೆ ಹುಳಿಯೂರು ಹೋಬಳಿಯಲ್ಲಿ ಬಿರುಗಾಳಿಗೆ ಸಿಕ್ಕಿದ ಹೆಂಚಿನ ಮನೆಗಳು ಹೆಚ್ಚಾಗಿಯೂ ಜೋಪಡಿಯು ಬೀದಿಪಾಲಾಗಿರುತ್ತವೆ. ಈ ಎಲ್ಲಾ ಕಾರಣಗಳಿಂದ ನೊಂದಿರುವ ರೈತರುಗಳಿಗೆ ಮತ್ತು ನಿವಾಸಿಗಳಿಗೆ ಸುಮಾರು ೫೦ ಲಕ್ಷರೂಪಾಯಿಗಳವರೆಗೆ ನಷ್ಟವಾಗಿರ ಬಹುದೆಂದು ಊಹಿಸಲಾಗಿದೆ. ಈ ಸಂದರ್ಭದಲ್ಲಿ ನೊಂದಿರುವ ರೈತರಿಗೆ ತಾರತಮ್ಯವಿಲ್ಲದೆ ಮುರಿದು ಹೋದ ತೆಂಗು ಮತ್ತು ಅಡಿಕೆ ಮರಗಳ ಬದಲಿಗೆ ತೆಂಗು ಮತ್ತು ಅಡಿಕೆ ಸಸಿಗಳನ್ನು ಅಷ್ಟೇ ಪ್ರಮಾಣದಲ್ಲಿ ಸಬ್ಸಿಡಿ ಆಗಿ ಬದಲಿಸುವುದರ ಮೂಲಕ ಮತ್ತು ಭತ್ತದ ಬೆಳೆ ಕಳೆದುಕೊಂಡವರಿಗೆ ಅವರವರ ಬೇಸಾಯದ ಖರ್ಚಿನ ಮತ್ತು ಗೊಬ್ಬರಗಳಿಗೆ ಸಮಾನವಾಗಿ ಹಣದ ರೂಪದ ಪರಿಹಾರ ಮತ್ತು ಮನೆ ಹೆಂಚುಗಳನ್ನು ಕಳೆದುಕೊಂಡವರಿಗೆ ಹೆಂಚುಗಳನ್ನು ಪುಕ್ಕಟೆ ಆಗಿ ಕೊಡಿಸುವ ವ್ಯವಸ್ಥೆಗಳನ್ನು ತ್ವರಿತವಾಗಿ ಸರ್ಕಾರ ಏರ್ಪಡಿಸಬೇಕೆಂದು ಮತ್ತು ೧೯೮೭–೮೮ನೇ ಸಾಲಿನಲ್ಲಿ ತಿರಾ ತಾಲ್ಲೂಕ್ ಬೆಳ್ಳಾವಟ್ಟಣ ಹೋಬಳಿ ಕಲಾದಹಳ್ಳಿ ಮತ್ತು ಊಮಿಲಾ ದೊರೆತ ರೈತರಿಗೆ ಭಾರಿ ಮಳೆಯ ಹೆಚ್ಚು ಪ್ರವಾಹದಿಂದ ಭೂ ಕೊರೆತ ಮತ್ತು ಹಂಪುಸೆಟ್ಟುಗಳಿಗೆ ಹಾನಿ ಹಾಗೂ ಫಸಲು ನಷ್ಟಗಳಿಗೆ ಸೂಕ್ತ ಪರಿಹಾರ ದೊರಕಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ದಿನಾಂಕ ೨೩ ಮತ್ತು ೨೪–೪–೮೮ ರಂದು ತುಮಕೂರು ಜಿಲ್ಲೆಯ ಕಳ್ಳಂಬೆಳ್ಳ ಕ್ಷೇತ್ರದ ಹುಳಿಯಾರು ಹೋಬಳಿ ಹಾಗೂ ತಿರಾ ಕ್ಷೇತ್ರದಲ್ಲಿ ಆಲಿಕಲ್ಲು ಮಳೆ ಸಹಿತ ಬಿರುಗಾಳಿ ಉಂಟಾಗಿ ರೈತರ ಬೆಳೆ ನಾಶವಾಗಿರುವುದು ಸತ್ಯಾಂಶವೆ. ತಿರಾ ಹಾಗೂ ಚಿಕ್ಕನಾಯಕನ ಹಳ್ಳಿ ತಾಲ್ಲೂಕುಗಳಲ್ಲಿ ಮೇಲಿನ ಪ್ರಕೃತಿ ವಿಕೋಪದಿಂದ, ಭತ್ತ ತೆಂಗು ಇತರೆ ಬೆಳೆಗಳಿಗೆ ಹಾನಿ ಉಂಟಾಗಿದ್ದು, ಒಟ್ಟು ೧೨.೬೯ ಲಕ್ಷ ರೂಪಾಯಿಗಳ ನಷ್ಟ ಉಂಟಾಗಿರುತ್ತದೆ. ಹಾಲಿ ಇರುವ ನಿಯಮಾವಳಿಗಳಡಿಯಲ್ಲಿ ರೂ ೩,೫೦೦ ರೂಪಾಯಿಗಿಂತ ಕಡಿಮೆ ವಾರ್ಷಿಕ ವರಮಾನ ಇರುವ ಪ್ರತಿ ಕುಟುಂಬಕ್ಕೂ ಗರಿಷ್ಠ ಪರಿಹಾರ ೮೦೦ ರೂ. ಗಳು ಅವರವರ ನಷ್ಟಕ್ಕನುಸಾರವಾಗಿ ನೀಡಲು ಅವಕಾಶವಿರುತ್ತದೆ. ಈ ಪರಿಹಾರವನ್ನು ಜಿಲ್ಲಾಧಿಕಾರಿ, ಸಹಾಯ ಆಯುಕ್ತರು ಮತ್ತು ತಹಶೀಲ್ದಾರರು ತಮ್ಮ ತಮ್ಮ ಅಧಿಕಾರಿಗಳ ವ್ಯಾಪ್ತಿಗನುಗುಣವಾಗಿ ಪರಿಹಾರ ನೀಡುವ ವಿಶೇಷಾಧಿಕಾರವನ್ನು ಹೊಂದಿರುತ್ತಾರೆ. ಇದೇ ರೀತಿ ಸದರಿ ಪ್ರಕೃತಿ ವಿಕೋಪದಲ್ಲಿ ಮನೆ ಕಳೆದುಕೊಂಡವರಿಗೂ ಅಥವಾ ಮನೆಗೆ ಹಾನಿ ಉಂಟಾದ

ಪಂಗೆಲ್ಲ ರೂ. ೬೦೦ ಬೆಲೆ ಬಾಳುವ ಕಟ್ಟಡ ಸಾಮಗ್ರಿಗಳನ್ನು ಒದಗಿಸಲು ಅವಕಾಶವಿದೆ. ಇಂತಹ ನೊಂದ ಕುಟುಂಬದ ವಾರ್ಷಿಕ ವರಮಾನ ೩,೫೦೦ ರೂ.ಗಳಿಗಿಂತ ಕಡಿಮೆ ಇರಬೇಕು. ವಾರ್ಷಿಕ ವರಮಾನ ೩,೫೦೦ ರೂ.ಗಳಿಗಿಂತ ಹೆಚ್ಚಾಗಿದ್ದು, ಪಟ್ಟ ನಷ್ಟ ಬಹಳವಾಗಿದೆ ಮತ್ತು ಅಂತಹವರಿಗೆ ಪರಿಹಾರ ನೀಡುವುದು ಅಗತ್ಯ ಎಂದು ಜಿಲ್ಲಾಧಿಕಾರಿಗಳು ಪರಿಗಣಿಸಿದಂತಹ ಪ್ರಕರಣಗಳನ್ನು ಸೂಕ್ತ ಶಿಫಾರಸ್ಸುಗಳೊಂದಿಗೆ, ಪ್ರಸ್ತಾವನೆಗಳನ್ನು ಸರಕಾರಕ್ಕೆ ಕಳುಹಿಸುತ್ತಾರೆ.

ಚಿಕ್ಕನಾಯಕನಹಳ್ಳಿ ಸುಲೇನೂರುಗ್ರಾಮ ವಾಸಿಯೊಬ್ಬರು ಶ್ರೀ ಕೋಳಿ ಕರಿಯಪ್ಪ ಮೃತಪಟ್ಟಿದ್ದು, ಇವರ ಕುಟುಂಬದವರಿಗೆ ಯೋಜನೆಯಡಿಯಲ್ಲಿ ದೊರಕಬಹುದಾದ ಪರಿಹಾರವನ್ನು ನೀಡುವ ಕ್ರಮವನ್ನು ಸಹಾಯಕ ಆಯುಕ್ತರು ಕೈಗೊಳ್ಳುತ್ತಿದ್ದಾರೆ. ಈ ಯೋಜನೆಯಡಿಯಲ್ಲಿ ಗರಿಷ್ಠ ಐದು ಸಾವಿರ ರೂಪಾಯಿಗಳ ಪರಿಹಾರ ನೀಡಲು ಅವಕಾಶವಿರುತ್ತದೆ.

೪) ಕಾಪು ಕ್ಷೇತ್ರದ ಮಂಟ್ಪ ಗ್ರಾಮದಲ್ಲಿ ಹೊಸದಾದ ಟ್ರಾನ್ಸ್‌ಫಾರ್ಮರ್ ಹಾಕುವುದರ ಬಗ್ಗೆ.—

ಶ್ರೀ ವಸಂತ ವಿ.ಸಾಲಿಯಾನ್.—ಕಾಪು ಕ್ಷೇತ್ರದ ಮಂಟ್ಪ ಗ್ರಾಮದಲ್ಲಿ ನೂರಾರು ಇಲೆಕ್ಟ್ರಿಕ್ ಪಂಪ್‌ಸೆಟ್ಟುಗಳನ್ನು ಬಳಸಿ ರೈತರು ಕೃಷಿ ಕೆಲಸವನ್ನು ನಡೆಸುತ್ತಿದ್ದಾರೆ. ಅಲ್ಲಿ ವಿದ್ಯುತ್ ಸರಬರಾಜು ಸರಿಯಾಗಿ ನಡೆಯದ ಕಾರಣ ಮತ್ತು ವಿದ್ಯುಚ್ಛಕ್ತಿ ಸರಬರಾಜಿನ ತೊಂದರೆಯಿಂದಾಗಿ ಕೃಷಿಗೆ ಸರಿಯಾಗಿ ನೀರು ಒದಗಿಸಲು ತೊಂದರೆಯಾಗಿದೆ. ಇದರಿಂದಾಗಿ ಅಲ್ಲಿ ಹೊಸದಾದ ಟ್ರಾನ್ಸ್‌ಫಾರ್ಮರ್ ಬೇಕಾಗಿದ್ದು, ಇಲಾಖೆಯವರು ಪರಿಶೀಲಿಸಿ ಟ್ರಾನ್ಸ್‌ಫಾರ್ಮರ್ ಒದಗಿಸುವ ಭರವಸೆ ನೀಡಿದ್ದರು. ಇದಕ್ಕೆತಗಲುವ ಇತರ ವೆಚ್ಚದ ಬಗ್ಗೆ ಊರಿನವರು ಸೇರಿಕೊಂಡು ಇಲಾಖೆಗೆ ಸಹಾಯ ಮಾಡಿರುತ್ತಾರೆ. ಆದರೆ ವಿದ್ಯುತ್ ಇಲಾಖೆಯವರು ಈ ತನಕ ಸಾಮಗ್ರಿಗಳ ಕೊರತೆಯಿಂದ ಹೊಸತಾದ ಟ್ರಾನ್ಸ್‌ಫಾರ್ಮರನ್ನು ಒದಗಿಸಿಕೊಡಲಿಲ್ಲ. ಇದರಿಂದಾಗಿ ಅಲ್ಲಿಯ ಕೃಷಿಕರಿಗೆ ತೊಂದರೆಯಾಗಿದ್ದು, ಸರ್ಕಾರವು ಈ ಬಗ್ಗೆ ಕೂಡಲೇ ಪರಿಶೀಲಿಸಿ ಆ ಗ್ರಾಮದ ರೈತರಿಗೆ ನ್ಯಾಯ ಒದಗಿಸಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಸದಸ್ಯರು ಕೇಳಿದ ವಿಚಾರಕ್ಕೆ ಎಷ್ಟು ಪ್ರಯತ್ನ ಪಟ್ಟರೂ ಕೂಡ ಅಲ್ಲಿಂದ ಸಂಪರ್ಕ ಮಾಡಿ ವಿವರಣೆಗಳನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಆದರೂ ಕೂಡ ಅಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ನ್ನು ಒದಗಿಸಿಕೊಡುವುದಕ್ಕೆ ತಕ್ಷಣ ವ್ಯವಸ್ಥೆ ಮಾಡುತ್ತೇನೆ ಎಂಬುದನ್ನು ಹೇಳುತ್ತೇನೆ.

೫ ದಕ್ಷಿಣ ಕನ್ನಡದ ಹಜ್‌ಯಾತ್ರಿಕರಿಗೆ ಮಂಗಳೂರಿನಲ್ಲಿಯೇ ಚುಚ್ಚುಮದ್ದು ಹಾಕಿಸಲು ಮನವಿ

ಶ್ರೀ ಬಿ.ಎಂ.ಇದಿನಬ್ಬ.—ಹಜ್ ಯಾತ್ರೆ ಕೈಗೊಳ್ಳುವವರು ಈ ವರ್ಷದಿಂದ ಬೆಂಗಳೂರಿನಿಂದ ರೋಗನಿರೋಧಕಚುಚ್ಚುಮದ್ದು ಹಾಕಿಸಿಕೊಳ್ಳಬೇಕೆಂದು ರಾಜ್ಯಸರ್ಕಾರ ಆದೇಶಹೊರಡಿಸಿರುತ್ತದೆ. ಈ ಮೊದಲಿನವರ್ಷಗಳಲ್ಲಿ ಆಯಾಯ ಜಿಲ್ಲೆಯಲ್ಲಿ ಚುಚ್ಚುಮದ್ದು ತೆಗೆದುಕೊಳ್ಳುವ ಅವಕಾಶ ಸೌಲಭ್ಯವಿತ್ತು. ಇದೀಗದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಐನೂರಕ್ಕೂ ಮೇಲ್ಪಟ್ಟು ಹಜ್‌ಯಾತ್ರಿಕರಿದ್ದಾರೆ. ೫ ರೂಪಾಯಿ ಬೆಲೆಯ ಈ ಚುಚ್ಚುಮದ್ದನ್ನು ಹಾಕಿಸಲು ೫೦೦ ರೂಪಾಯಿ ಖರ್ಚು ಮಾಡಿ ಯಾತ್ರಿಕರು ಬೆಂಗಳೂರಿಗೆ ಬರುವುದರಿಂದ ಭಾರೀ ತೊಂದರೆ ಮತ್ತು ಕಷ್ಟಗಳಾಗುತ್ತಿವೆ. ಈಗಿನ ಹೊಸ ಕ್ರಮ ಬೇರಾವ ರಾಜ್ಯದಲ್ಲಿಯೂ ಇರುವುದಿಲ್ಲ. ಆದ ಕಾರಣ ದಕ್ಷಿಣ ಕನ್ನಡದ ಹಜ್ ಯಾತ್ರಿಕರಿಗೆ ಮಂಗಳೂರಿನಲ್ಲೇ ಚುಚ್ಚುಮದ್ದು ಹಾಕಿಸಿಕೊಳ್ಳುವಂತೆ ಅತೀಶೀಘ್ರವೇ ಆದೇಶ ನೀಡಿ ಉಪಚರಿಸಬೇಕು. ಇದು ಅತೀ ಪ್ರಾಮುಖ್ಯ ಕೂಡ ಈ ಕುರಿತು ಆರೋಗ್ಯ ಸಚಿವರ ಗಮನ ಸೆಳೆಯುತ್ತೇನೆ.